# ಈಗ ಬಾಲ್ಯ, ಮುಂದೆ ನೋಡೋಣ!

**ಶಶಿಕಲಾ ಶ್ರೀಧರ್**

ಆಧ್ಯಾತ್ಮಿಕ ಸಾಧನೆಯನ್ನು ಆರಂಭಿಸಲು ಅತ್ಯುತ್ತಮವಾದ ಸಮಯವೇ ಬಾಲ್ಯ ಎಂಬ ವಿಷಯವನ್ನು ಅನೇಕರು ಮನಗಂಡಿಲ್ಲ. ಹಲವರಿಗೆ ಈ ಸಂಗತಿ ತಿಳಿದಿದ್ದರೂ, ಹಲವು ಕಾರಣಗಳಿಂದ ತಮ್ಮ ಬಾಲ್ಯವನ್ನು ಸದ್ಬಳಕೆ ಮಾಡಲು ಸಾಧ್ಯವಾಗದೆ ಹೋಗಿರಬಹುದು. ಬಾಲ್ಯದಲ್ಲೇ ಸಾಧನೆ ಆರಂಭಿಸುವುದರ ಮಹತ್ವವನ್ನಿಲ್ಲಿ ತಿಳಿಸಿಕೊಡುವ ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ನುರಿತವರು.

**ಕೃಷ್ಣ ತ್ವದೀಯ ಪದಪಂಕಜಪಂಜರಾಂತಃ**
**ಅದ್ಯೈವ ಮೇ ವಿಶತು ಮಾನಸ ರಾಜಹಂಸಃ ।**
**ಪ್ರಾಣಪ್ರಯಾಣಸಮಯೇ ಕಫವಾತಪಿತ್ತೈಃ**
**ಕಂಠಾವರೋಧನವಿಧೌ ಸ್ಮರಣಂ ಕುತಸ್ತೇ ॥**

'ಹೇ ಕೃಷ್ಣ, ನನ್ನ ಮನಸ್ಸೆಂಬ ರಾಜಹಂಸವು ನಿನ್ನ ಪಾದ ಕಮಲಗಳೆಂಬ ಪಂಜರದಲ್ಲಿ ಈಗಲೇ ಸೇರಿಕೊಳ್ಳಲಿ. ಏಕೆಂದರೆ ಪ್ರಾಣೋತ್ಕ್ರಮಣ ಕಾಲದಲ್ಲಿ ಕಫ, ವಾತ, ಪಿತ್ತಗಳಿಂದ ಕಂಠವು ಕಟ್ಟಿರುವಾಗ ನಿನ್ನ ಸ್ಮರಣೆ ಹೇಗೆ ಸಾಧ್ಯವಾದೀತು?'

– ಕುಲಶೇಖರ ಆಳ್ವಾರರು ತಮ್ಮ 'ಮುಕುಂದಮಾಲಾ ಸ್ತೋತ್ರ' ದಲ್ಲಿ ಕೃಷ್ಣನನ್ನು ಕುರಿತು ಹೀಗೇಕೆ ಪ್ರಾರ್ಥಿಸಿದರು?

ಭಗವತ್ಸ್ಮರಣೆಯನ್ನು ಈಗಲೇ ಎಂದರೆ ಬಾಲ್ಯದಲ್ಲೇ ಪ್ರಾರಂಭಿಸಬೇಕು. ಅದಕ್ಕೆ ವಯೋಮಿತಿ ಎಂಬುದಿಲ್ಲ. ಈ ಕಾಯ ದೃಢ ಕಾಯವಾಗಿರುವಾಗಲೇ ಆರಂಭಿಸಬೇಕು. ಎಷ್ಟು ಬೇಗ ಪ್ರಾರಂಭಿಸಿದರೆ ನಮ್ಮ ಬಾಳಿಗೆ ಅಷ್ಟು ಬೇಗ ಲಾಭ! 'ಭಗವಂತ' 'ಬೆಳಕು' ಅವೆಲ್ಲಾ ಈಗೇಕೆ, ವಯಸ್ಸಾದಮೇಲೆ ಯೋಚಿಸಿದರಾಯಿತು ಎಂದುಕೊಂಡರೆ, ಅದರಷ್ಟು ಅಜ್ಞಾನ ಬೇರೊಂದಿಲ್ಲ. ಮಾನವನ ಯೌವನಾವಸ್ಥೆಯಲ್ಲಿರುವ ದೇಹಶಕ್ತಿ, ಬುದ್ಧಿಶಕ್ತಿ, ಮನಶ್ಶಕ್ತಿ, ಜ್ಞಾಪಕಶಕ್ತಿ ಇವು ಅವನ ಆಯು ಕ್ಷೀಣಿಸುತ್ತಾ ಬಂದಂತೆ, ಅದರೊಡನೆಯೇ ಅವುಗಳೂ ಕ್ಷೀಣಿಸುತ್ತಾ ಬರುತ್ತವೆ. ಮುಂದೆ ಭಗವತ್ಪ್ರಾಪ್ತಿಗಾಗಿ ಮಾಡಬೇಕಾದ ಸಾಧನೆಗೆ ಸಮಯವೆಲ್ಲಿ? ಉತ್ಸಾಹವೆಲ್ಲಿ? ಅವಕಾಶವೆಲ್ಲಿ? ಅನುಕೂಲವೆಲ್ಲಿ? ಆಯಾಸ, ಅನಾರೋಗ್ಯ ಆವರಿಸಿ, ಜೀವನ ನೀರಸವೆನಿಸಿ, ದಿನಗಳನ್ನು ಕಳೆಯುವುದೇ ದುರ್ಭರವೆನಿಸಿ, ಬಾಳಿನ ಅಂತ್ಯವನ್ನೇ ನಿರೀಕ್ಷಿಸುತ್ತಾ ಕುಳಿತಿರಬೇಕಾದ ಪರಿಸ್ಥಿತಿ ಎಲ್ಲರ ಬಾಳಿನಲ್ಲೂ ಬರುತ್ತದೆ.

ಹಾಗಾದರೆ ಇವೆಲ್ಲದರಿಂದ ಬಿಡುಗಡೆ ಇಲ್ಲವೆ? — ಏಕಿಲ್ಲ? ಬಾಲ್ಯದಲ್ಲೇ ಎಚ್ಚರವಹಿಸಿದರೆ ಇದು ಸುಲಭಸಾಧ್ಯ. ಹದಿ ಹರೆಯದಲ್ಲಿರುವಾಗಲೇ ಜೀವನದ ಪರಮಾರ್ಥವಾದ ಭಗವತ್ಪ್ರಾಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡು ಧರ್ಮ–ಮೋಕ್ಷಗಳೆಂಬ ಪುರುಷಾರ್ಥಗಳ ಹದ್ದುಬಸ್ತಿನಲ್ಲಿ ಅರ್ಥ–ಕಾಮಗಳನ್ನು ಅನುಭವಿಸುತ್ತಾ, ಸದ್ವಿಚಾರ, ಸತ್ಸಂಗ ಇವುಗಳ ಮೂಲಕ ಸದ್ಗುರುವಿನ ಅನುಗ್ರಹ ಪಡೆದು, ಅಂಧಕಾರದ ಈ ಅರಣ್ಯದಿಂದ ಪಾರಾಗಿ, ಬೆಳಕಿನ ಕಿರಣಗಳನ್ನು ದರ್ಶಿಸಿ ಆನಂದಿಸಿ — ಎಂಬುದು ಅರಿತವರು, ಅನುಭಾವಿಗಳು ನೀಡುವ ಆದೇಶ; ಇದು ಅವರ ಚರಮ ಸಂದೇಶ!

ಹೀಗೆ ಮಾಡದಿದ್ದಲ್ಲಿ ಬಾಳಿನ ಕಡೆಯ ದಿನಗಳಲ್ಲಿ ಅತ್ಯಂತ ಕಷ್ಟಪಡಬೇಕಾದ ಸನ್ನಿವೇಶ ಉಂಟಾಗುವುದು. ಸಂತ ಅಚ್ಯುತ ದಾಸರು ತಮ್ಮ 'ರಾಮಕಥಾವಾಹಿನಿ'ಯಲ್ಲಿ ಈ ವಿಚಾರದ ಬಗ್ಗೆ ಅತಿ ಸುಂದರವಾದ ವಿವರಣೆಯನ್ನು ಕೊಡುತ್ತಾ, ''ಕೆಲವರು ಭಗವಂತನ ಸಾಕ್ಷಾತ್ಕಾರಕ್ಕಾಗಿ ಮಾಡಬೇಕಾದ ಸಾಧನೆಯನ್ನು ನಾವು ನಿವೃತ್ತರಾದ ಮೇಲೆ ಮಾಡೋಣವೆಂದೂ, ಇನ್ನು ಕೆಲವರು ಗೀತೆಯಲ್ಲಿ ಕೃಷ್ಣ 'ಅಂತ್ಯಕಾಲದಲ್ಲಿ ನನ್ನನ್ನು ಸ್ಮರಿಸಿದವರು ನನ್ನನ್ನೇ ಬಂದು ಸೇರುತ್ತಾರೆ' ಎಂದು ಹೇಳಿರುವುದರಿಂದ, ನಮ್ಮ ಅಂತ್ಯಕಾಲದಲ್ಲಿ ವೈದ್ಯರು ಬಂದು 'ಇವನು ಬದುಕುವುದಿಲ್ಲ' ಎಂದ ಮೇಲೆ ಭಜನೆ ಸಾಧನೆ ಮಾಡಿದರಾಯಿತು ಎನ್ನುವವರೂ ಇದ್ದಾರೆ!'' ಎನ್ನುತ್ತಾರೆ.

ದಾಸವರೇಣ್ಯ ಪುರಂದರರು,

'ವರುಷ ಕಾರಣವಲ್ಲ ಹರಿಭಜನೆಗೆ
ಅರಿತು ತತ್ತ್ವಜ್ಞರು ಕೇಳಿ ಸನ್ಮುದದಿ
ತರಳತನದಲ್ಲಿ ಕಂಡ ಹರಿಯ ಧ್ರುವರಾಯನು
ಹಿರಿಯ ತಾನವನಪ್ಪ ಕಂಡನೇನೋ
ತರಳ ಪ್ರಹ್ಲಾದನು ನರಹರಿಯ ತಾ ಕಂಡ
ಹಿರಿಯನವನಪ್ಪ ತಾ ಮರೆಯಲಿಲ್ಲೇನೋ'

ಎಂದು ಹಾಡುವಾಗ, ಧ್ರುವ ಪ್ರಹ್ಲಾದರ ದೃಷ್ಟಾಂತ ಕೊಡುತ್ತಾರೆ; ಹರಿಭಜನೆಗೆ ಕೇವಲ ವಯಸ್ಸು ಕಾರಣವಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಉಪನಿಷತ್ತಿನಲ್ಲಿಯೂ ನಚಿಕೇತ, ಸತ್ಯಕಾಮ ಜಾಬಾಲ ಮುಂತಾದ ಬಾಲ ಸಾಧಕರ ದೃಷ್ಟಾಂತಗಳನ್ನು ಕಾಣುತ್ತೇವೆ.

ಸಂತ ಅಚ್ಯುತದಾಸರು ಒಂದು ಸಣ್ಣ ಕಥೆಯ ಮೂಲಕ ಈ ವಿಷಯದ ಸ್ಪಷ್ಟೀಕರಣ ಮಾಡುತ್ತಾ, ಹಾಸ್ಯರಸದ ಮೂಲಕ ಭಕ್ತಿರಸವನ್ನು ಉಣಬಡಿಸುವುದನ್ನು ನೋಡೋಣ:

''ಒಮ್ಮೆ ಒಬ್ಬ ಸಂನ್ಯಾಸಿಯು ಒಂದು ಮನೆಯ ಮುಂದೆ ಬಂದು ಭಿಕ್ಷೆ ಯಾಚಿಸಿದ. ಆ ಮನೆಯೊಡತಿ ಭಿಕ್ಷೆ ಹಾಕಲು ಬಂದಾಗ, ಸಂನ್ಯಾಸಿ ಅವಳಿಗೆ ಆಶೀರ್ವಾದ ಮಾಡುತ್ತಾ, 'ತಾಯಿ, ನಿನ್ನ ವಯಸ್ಸೆಷ್ಟು?' ಎಂದು ಕೇಳಿದ. ಆ ಗೃಹಿಣಿಯು ಸಂನ್ಯಾಸಿಯನ್ನು ನಮಸ್ಕರಿಸಿ, ಮುಗುಳ್ನಗುತ್ತಾ, 'ನನಗೆ ಕೇವಲ ಒಂದು ವರ್ಷ' ಎಂದಳು. ಆ ನಡು ವಯಸ್ಸಿನ ಗೃಹಿಣಿ ಹಾಗೆ ಹೇಳಿದಾಗ ಕುತೂಹಲಗೊಂಡ ಸಂನ್ಯಾಸಿ, 'ನಿಮ್ಮ ಯಜಮಾನರ ವಯಸ್ಸೆಷ್ಟು?' ಎಂದು ಕೇಳಿದ. ಆಕೆ, 'ಅವರಿನ್ನೂ ಆರು ತಿಂಗಳ ಮಗು' ಎಂದಳು. ಹಾಗಾದರೆ ನಿಮ್ಮ 'ಅತ್ತೆಮಾವಂದಿರ ವಯಸ್ಸೆಷ್ಟು?' ಎಂದ ಸಂನ್ಯಾಸಿ. ಅದಕ್ಕೆ ಆಕೆ, 'ಅವರಿನ್ನೂ ಮೂರು ತಿಂಗಳ ತೊಟ್ಟಿಲ ಕೂಸುಗಳು' ಎಂದು ಉತ್ತರಿಸಿದಳು. ಆ ಸಂನ್ಯಾಸಿ 'ನನಗೆ ನಿನ್ನ ಮಾತುಗಳು ಅರ್ಥವಾಗುತ್ತಿಲ್ಲ, ಅದರರ್ಥವನ್ನು ಬಿಡಿಸಿ ಹೇಳು ತಾಯೆ!' ಎಂದು ಕೇಳಿದ. ಆ ಗೃಹಿಣಿ, 'ಸ್ವಾಮಿ, ನನ್ನ ದೇಹಕ್ಕೆ ಮೂವತ್ತೈದು ವರ್ಷಗಳಾದವು. ಆದರೆ ಇಷ್ಟು ವರ್ಷವೂ ನಾನು ಕೇವಲ ಉಡುಗೆ-ತೊಡುಗೆ, ಉಣಿಸು-ತಿನಿಸು ಇವುಗಳಲ್ಲೇ ಆಯುಷ್ಯ ಕಳೆದಿದ್ದೆ. ಆದರೆ ಇತ್ತೀಚೆಗೆ ಒಂದು ವರ್ಷದಿಂದ ಭಜನೆ, ಸತ್ಸಂಗ ಪೂಜಾದಿಗಳಲ್ಲಿ ಕಾಲ ಕಳೆಯುತ್ತಿರುವುದರಿಂದ ನನಗೆ ಒಂದೇ ವರ್ಷ ಪ್ರಾಯ ಎಂದೆ. ಇನ್ನು ನಮ್ಮ ಯಜಮಾನರು ಇದುವರೆಗೂ ದೊಡ್ಡ ದೊಡ್ಡ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿದ್ದು ಈಗ ಯಾರಿಂದಲೋ ವ್ಯಾಪಾರದಲ್ಲಿ ಮೋಸಹೋಗಿ, ಬೇಸತ್ತು ಕಳೆದ ಆರು ತಿಂಗಳಿಂದ ನನ್ನೊಡನೆ ಭಜನೆ ಸತ್ಸಂಗ ಸತ್ಕಲಾಪಗಳಲ್ಲಿ ಕಾಲದ ಸದ್ವಿನಿಯೋಗ ಮಾಡುತ್ತಿರುವುದರಿಂದ ಅವರ ವಯಸ್ಸು ಆರು ತಿಂಗಳು ಎಂದು ಹೇಳಿದೆ. ಇನ್ನು ನಮ್ಮ ಅತ್ತೆ ಮಾವಂದಿರಾದರೋ ಸತ್ಸಂಗ ಭಜನೆಗಳಲ್ಲಿ ತೊಡಗಿಕೊಂಡಿರುವ ನಮ್ಮನ್ನು ಹೀಯಾಳಿಸುತ್ತಿದ್ದರು. ಆದರೆ ಮೂರು ತಿಂಗಳ ಕೆಳಗೆ ನಮ್ಮ ಅತ್ತೆಗೆ ಪಾರ್ಶ್ವವಾಯು ಹೊಡೆದಿದೆ, ಮಾವನವರಿಗೆ ಕಾಲುಗಳಲ್ಲಿ ಶಕ್ತಿ ಕಡಿಮೆಯಾಗಿ ನಡೆಯಲಾಗದಂತಾಗಿದೆ. ಈಗ ಅವರು 'ನಮ್ಮನ್ನೂ ಸತ್ಸಂಗ ಭಜನೆಗಳಿಗೆ ಕರೆದುಕೊಂಡು ಹೋಗಿ'ಎನ್ನುತ್ತಿದ್ದಾರೆ. ಆದ್ದರಿಂದ ಅವರ ವಯಸ್ಸು ಮೂರೇ ತಿಂಗಳು ಎಂದೆ' ಎಂಬುದಾಗಿ ವಿವರಿಸಿ ಹೇಳಿದಾಗ ಸಂನ್ಯಾಸಿಗೆ ಮೈಬೆವರಿತು. ಸುಮ್ಮನೆ ಭಿಕ್ಷೆ ಬೇಡುತ್ತಾ ತಿರುಗುತ್ತಿದ್ದ ಅವನು ಆ ಗೃಹಿಣಿಯನ್ನು ಕುರಿತು, 'ತಾಯೇ, ನಿನ್ನ ಲೆಕ್ಕದಲ್ಲಿ ನಾನಿನ್ನು ಹುಟ್ಟಲೇ ಇಲ್ಲ' ಎಂದ !''

ಆದ್ದರಿಂದ ಅಮೂಲ್ಯವಾದ ಈ ಮಾನವ ಜನ್ಮ ಪ್ರಾಪ್ತಿಯಾಗಿರುವಾಗ ಅದನ್ನು ಬಾಲ್ಯದಿಂದಲೇ ಸಾಧನೆಗೆ ತೊಡಗಿಸಿಬಿಡಬೇಕು. ಭಾಗವತ ಶಿರೋಮಣಿ ಪ್ರಹ್ಲಾದನು ಗುರುಕುಲದಲ್ಲಿ ತನ್ನ ಸಹಪಾಠಿಗಳಾದ ರಾಕ್ಷಸಕುಮಾರರಿಗೆ,

**ಕೌಮಾರ ಆಚರೇತ್ ಪ್ರಾಜ್ಞೋ ಧರ್ಮಾನ್ ಭಾಗವತಾನಿಹ।**
**ದುರ್ಲಭಂ ಮಾನುಷಂ ಜನ್ಮ ತದಪ್ಯಧ್ರುವಮರ್ಥದಮ್॥**

*(೭-೬-೧)*

'ಗೆಳೆಯರೇ, ಮನುಷ್ಯ ಜನ್ಮವು ಅತ್ಯಂತ ದುರ್ಲಭವಾದುದು. ಅವಿನಾಶಿಯಾದ ಪರಮಾತ್ಮನನ್ನು ಹೊಂದಲು ಇದರಿಂದ ಮಾತ್ರ ಸಾಧ್ಯವಾಗುವುದು. ಈ ಶರೀರ ಯಾವಾಗ ನಾಶವಾಗಿ ಬಿಡುವುದೋ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ವಿವೇಕಿ ಯಾದವನು ಪ್ರಾಯದವರೆಗೂ ಮುಪ್ಪಿನವರೆಗೂ ಕಾಯದೆ ಭಗವತ್ಪ್ರಾಪ್ತಿಗೆ ಬೇಕಾದ ಭಾಗವತಧರ್ಮವನ್ನು ಬಾಲ್ಯದಲ್ಲಿಯೇ ಅನುಷ್ಠಾನ ಮಾಡಬೇಕು.'

ಈ ವಿಚಾರವಾಗಿ ಶ್ರೀಮದ್ಭಾಗವತದ ಪ್ರಾಚೀನ ಪ್ರತಿಗಳಲ್ಲಿ ಮಾತ್ರ ಕಂಡು ಬರುವ, ಪಂಡಿತರಿಂದ ಮಾನ್ಯಮಾಡಲ್ಪಟ್ಟಿರುವ ಇನ್ನೂ ಐದು ಶ್ಲೋಕಗಳಲ್ಲಿ ಪ್ರಹ್ಲಾದಕುಮಾರನ ಉಪದೇಶಗಳಿವೆ. ಅವನು ಹೇಳುತ್ತಾನೆ: 'ಈಗ ಬಾಲ್ಯ; ಮುಂದೆ ನೋಡೋಣ' ಎಂದು ಶ್ರೇಯಸ್ಸಿನ ಸಾಧನೆಯನ್ನು ಮುಂದೂಡಬಾರದು, ಆಟಪಾಟಗಳಲ್ಲೇ ಆಸಕ್ತರಾಗಿ ಶ್ರೇಯಸ್ಸಿನ ಬಗ್ಗೆ ಕುರುಡರಾಗಿ ಎಚ್ಚರ ತಪ್ಪದಿರಿ. ಬಾಲ್ಯದಿಂದಲೇ ತಮ್ಮ ಪರಮಪ್ರಯೋಜನದ ಸಿದ್ಧಿಯನ್ನೇ ಬಯಸುತ್ತಿರಬೇಕು. ಇದರಿಂದ ನಮಗೆ ಎಲ್ಲೆಡೆಯೂ ಮಂಗಳವಾಗಿ ಪರಮಪುರುಷಾರ್ಥವು ದೊರೆಯುವುದು. ಯಾರ ಮಾತುಗಳನ್ನು ಕೇಳಿದರೆ ಅಜ್ಞಾನವೆಂಬ ನಿದ್ರೆಯಿಂದ ಎಚ್ಚರಿಕೆ ಉಂಟಾಗುವುದಿಲ್ಲವೋ ಅಂತಹವನ ಮಾತನ್ನು ಸರಿ ಎಂದು ನಂಬಬಾರದು. ಹಾಗೆ ನಂಬಿದರೆ ಕುರುಡನನ್ನು ಕುರುಡನು ಒಯ್ಯುವಂತೆ ಅನರ್ಥವೇ ಆಗುವುದು. ದೇವದೇವನಾದ ಶ್ರೀಮನ್ನಾರಾಯಣನೇ ಸಂಪತ್ತು ಮತ್ತು ವಿಪತ್ತುಗಳಿಗೆ ಆಶ್ರಯನು. ಆತನ ಅನುಗ್ರಹದಿಂದಲೇ ಅಜ್ಞಾನವೆಂಬ ವಿಪತ್ತಿನ ಪರಿಹಾರ ಮತ್ತು ಜ್ಞಾನವೆಂಬ ಸಂಪತ್ತಿನ ಲಾಭ.

ಮಾನವನ ಬಾಳಿನಲ್ಲಿ ಬಾಲ್ಯ ಅತ್ಯಂತ ಪರಿಶುದ್ಧವಾದುದು. ಪ್ರಾಪಂಚಿಕ ಆಮಿಷಗಳಿಗೆ ಬಲಿಯಾಗುವ ಮುನ್ನಿನ ಆಯು, ಅದು ಶುದ್ಧವಾದ ಹಸಿ ಜೇಡಿಮಣ್ಣಿನಂತೆ. ಕಂದನನ್ನು ಬೆಳೆಸುವ ತಾಯಿತಂದೆಯರು, ಪರಿಸರದ ಜನರು ಅದಕ್ಕೆ ಯಾವ ರೂಪವನ್ನು ಕೊಡುತ್ತಾರೋ ಅದು ಆ ಆಕಾರವನ್ನೇ ತಳೆದು ಬೆಳೆಯುತ್ತದೆ. ಉತ್ತಮ ಉದಾತ್ತ ಧ್ಯೇಯಗಳ ಸಂಸ್ಕಾರ ಬಿದ್ದರೆ ಅದು ಅಷ್ಟೇ ಸುಂದರವಾಗಿ ರೂಪುಗೊಳ್ಳುತ್ತದೆ. ಶ್ರೀಮಾತೆಯವರು ಹೇಳುತ್ತಾರೆ: ''ಯಾರ ಮನಸ್ಸು ಚಿಕ್ಕಂದಿನಿಂದಲೇ ದೇವರಿಗೆ ಒಂದು ಹೂವಿನಂತೆ ಅರ್ಪಿತವಾಗಿದೆಯೋ ಅವರೇ ನಿಜವಾಗಿ ಧನ್ಯರು'' ಎಂದು. ಬಾಲ್ಯದಲ್ಲಿ ಬೀಳುವ ಸಂಸ್ಕಾರ ಅತ್ಯಂತ ಪ್ರಬಲವಾದುದು. ಮಗು ಅದನ್ನು ಆಳವಾಗಿ ಅಳವಡಿಸಿಕೊಂಡಿರುತ್ತದೆ. ತಂದೆ, ತಾಯಿ, ಅಣ್ಣತಮ್ಮಂದಿರು, ಅಕ್ಕತಂಗಿಯರು, ಬಂಧು ಬಾಂಧವರು, ಗುರು ಹಿರಿಯರು, ಸಮಾಜದ

ಇತರ ವರ್ಗಗಳ ಜನರು, ದೂರದರ್ಶನವೇ ಮುಂತಾದ ಮಾಧ್ಯಮಗಳು, ವಾಚನಾಲಯದ ಗ್ರಂಥಗಳು ಮತ್ತು ಬಾಳಿನುದ್ದ ಬೆಳೆಸಿಕೊಂಡು ಹೋಗುವ ಸಾಮಾನ್ಯ ಜ್ಞಾನ, ಸರಿ-ತಪ್ಪುಗಳ ತಾರತಮ್ಯ ಜ್ಞಾನ, ಶಾಲಾ-ಕಾಲೇಜು ಹಾಗು ಇತರ ಸಂಸ್ಥೆಗಳ ಸಂಪರ್ಕದಿಂದುಂಟಾಗುವ ಸಂಸ್ಕಾರ ಇವೆಲ್ಲವನ್ನೂ ಸೇರಿಕೊಂಡು ಆ ಬಾಲ್ಯದ ಕಂದ ಬೆಳೆದು ಯೌವನಕ್ಕೆ ಕಾಲಿಡುತ್ತಾನೆ.

ಯಾವ ಜೀವಿಗೂ ತನ್ನ ಜೀವಿತಾವಧಿಯ ಅರಿವು ಇರುವುದಿಲ್ಲ. ಇದು ಪ್ರಕೃತಿಸಿದ್ಧ ಸತ್ಯ. ಪ್ರತಿಯೊಬ್ಬನೂ ತಾನು ಬಹಳ ಕಾಲ ಬಾಳುವ ಭರವಸೆಯಿಂದಲೇ ಬೆಳೆಯುತ್ತಾನೆ. ಆದರೆ ಜನನ-ಮರಣ ಎರಡೂ ನಮ್ಮ ಕೈಯಲ್ಲಿಲ್ಲ ಅಲ್ಲವೆ? ಭಗವಂತ ಅದರ ನಿಯಾಮಕ. ನಮಗೆ ಅವನು ಪರಮ ಕರುಣೆಯಿಂದ ನೀಡುವ ಆಯಸ್ಸು, ನಾವು ಅವನ ಮಕ್ಕಳಾಗಿ ಬೆಳೆದು, ಅವನನ್ನೇ ಮತ್ತೆ ಸೇರುವ ಪರಮ ಧ್ಯೇಯದೊಂದಿಗೆ ಸಾಧನೆಗೈಯಲಿ ಎಂಬುದು. 'ನನ್ನನ್ನು ಜೀವನದ ಅಂತ್ಯಕಾಲದಲ್ಲಿ ಸ್ಮರಿಸಿದರೂ ಸಾಕು ಆ ಜೀವನನ್ನು ಉದ್ಧರಿಸುತ್ತೇನೆ' ಎಂಬುದು ಭಗವಂತನ ಅಭಯವಾಣಿ. ಆದರೆ ಅದು ಅಷ್ಟು ಸುಲಭವೆ? ಬಾಳಿನುದ್ದಕ್ಕೂ ಅವನ ಪವಿತ್ರಸ್ಮರಣೆಯಲ್ಲಿ ಇದ್ದರೆ ಮಾತ್ರ ಅಂತ್ಯಕಾಲದಲ್ಲಿ ಭಗವಂತನ ಸ್ಮರಣೆ ಸಾಧ್ಯ! ಆದ್ದರಿಂದ ಜೀವನದ ಪ್ರತಿದಿನ, ಪ್ರತಿಕ್ಷಣದಲ್ಲೂ ನಾಳೆಯೇ ಬರಬಹುದಾದ ಮರಣದ ಬಗ್ಗೆ ಎಚ್ಚರಿಕೆಯಿಂದಿರಬೇಕು. ಆಗ ಮಾತ್ರ ನಿರಂತರ ಭಗವತ್ಸ್ಮರಣೆ ಸಾಧ್ಯ. ಭಗವಂತ ತನ್ನ ಮಾಯೆಯ ಮುಸುಕನ್ನು ನಮ್ಮ ಮೇಲೆ ಹರಡುವುದರಿಂದ ನಾವು ಅಮರರು, ನಮಗೆ ಮರಣವೇ ಇಲ್ಲ, ಇದ್ದರೂ ಬಹಳ ವರ್ಷಗಳ ಆಯುಸ್ಸಿದೆ ಎಂಬ ಅಜ್ಞಾನದಲ್ಲಿ ಮುಳುಗಿರುತ್ತೇವೆ. 'ಜಾತಸ್ಯ ಮರಣಂ ಧ್ರುವಂ!' ಅಲ್ಲವೆ? ನನ್ನ ಸಾವು ಇಂದಿಲ್ಲ ನಾಳೆ ಎಂಬ ಭ್ರಮೆಯಲ್ಲಿಯೇ ದಿನಗಳು ಕಳೆದು ಹೋಗುತ್ತವೆ. ಭಗವಂತನೇ ಪರಮ ಕರುಣೆಯಿಂದ ನಮ್ಮ ಮೇಲಿರುವ ಈ ಆವರಣವನ್ನು ಕಿತ್ತು ಹಾಕಿದರೆ ಮಾತ್ರ ನಾವು ಮರಣವನ್ನು ಜಯಿಸಲು ಸಾಧ್ಯ. ಇದನ್ನು ಪಡೆಯಲು ನಮ್ಮಲ್ಲಿ ಇರಬೇಕಾದ ಅರ್ಹತೆ — ಅವನ ನಿರಂತರ ಸ್ಮರಣೆ.

### ಈ ವಿಚಾರದಲ್ಲಿ ಪೋಷಕರ ಕರ್ತವ್ಯವೇನು?

ಜೀವನ ಉದ್ಧಾರದ ದೊಡ್ಡ ಆದರ್ಶವನ್ನು ಮುಂದಿಟ್ಟುಕೊಂಡು ಪೋಷಕರು ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಲೌಕಿಕ ವಿದ್ಯಾಭ್ಯಾಸದೊಡನೆಯೇ ಧಾರ್ಮಿಕ ವಿದ್ಯಾಭ್ಯಾಸವನ್ನೂ ನೀಡಿದರೆ ಆ ಕಂದನಿಗೆ ಅದೊಂದು ಭದ್ರಬುನಾದಿಯಾಗಿ ಬಿಡುವುದು. ಕಾರಣ, ಏನೂ ಅರಿಯದ ಮಕ್ಕಳನ್ನು ಪಾಶ್ಚಾತ್ಯರ ಭಾಷೆ, ವೇಷ, ನಾಗರಿಕತೆಗಳು ಬಹಳವಾಗಿ ಆಕರ್ಷಿಸಿಬಿಡುತ್ತವೆ. ಋಷಿಗಳ ತ್ಯಾಗಪೂರ್ಣ ಜೀವನ, ಧರ್ಮ ಮತ್ತು ದೈವ ಅವರಿಗೆ ರುಚಿಸುವುದಿಲ್ಲ. ಆದ್ದರಿಂದ ಮೌಲ್ಯವಾದುದನ್ನು, ಅಮರವಾದುದನ್ನು, ಅದ್ವಿತೀಯವಾದುದನ್ನು, ನಿತ್ಯವಾದುದನ್ನು ಮಕ್ಕಳು ಮೊದಲು ಅರಿತುಬಿಟ್ಟರೆ ಅನಂತರ ಅವರು ಯಾವುದೇ ಪರಿಸರದಲ್ಲೂ ತಮ್ಮತನವನ್ನು, ತಮ್ಮ ಈ ಅಮೂಲ್ಯ ಧನವನ್ನು ಕಳೆದುಕೊಳ್ಳುವುದಿಲ್ಲ.

ಇಂತಹ ಆದರ್ಶವನ್ನು ಮಕ್ಕಳ ಮುಂದೆ ಇಡಲು ಅನೇಕ ಬೋಧಪ್ರದ ಕಥೆಗಳಿರುವುದಲ್ಲವೆ? ಮುಗ್ಧ ಮನಸ್ಸಿನ ಮಕ್ಕಳು ಭಗವಂತನನ್ನು ಸುಲಭವಾಗಿ ಪಡೆಯಬಲ್ಲರು. ಭಗವಂತ ಎಂದೆಂದಿಗೂ ತನ್ನ ಸಮೀಪವೇ ತನ್ನ ಸಹಾಯಕ್ಕಾಗಿ ಇರುವನೆಂಬ ಶ್ರದ್ಧೆ ಮಕ್ಕಳಲ್ಲಿ ಉಂಟಾದರೆ, ಅಷ್ಟೇ ಸಾಕು. ಅದು ಅವನನ್ನು ಬಾಳಿನುದ್ದಕ್ಕೂ ಋಜುಮಾರ್ಗದಲ್ಲಿ ನಡೆಸುವುದು. ಬಾಲ ಗೋಪಾಲ, ಕೋಳೂರು ಕೊಡಗೂಸು, ಚಂದ್ರಹಾಸ, ಧ್ರುವ, ಪ್ರಹ್ಲಾದ, ಗೋವಿಂದ, ಧನ್ನಾ ಜಾಟ, ಸುಧನ್ವ, ಉಪನಿಷತ್ತಿನಲ್ಲಿ ಬರುವ ಸತ್ಯಕಾಮ ಜಾಬಾಲ, ಆರುಣಿ ಉದ್ದಾಲಕ, ನಚಿಕೇತ — ಇನ್ನು ಎಷ್ಟೋ ಮಕ್ಕಳ ಕಥೆಗಳು ನಮ್ಮ ಮಕ್ಕಳಿಗೆ ಸ್ಫೂರ್ತಿದಾಯಕ. ಸರಳ ಬಾಲಕರ ಮಧುರ ಪ್ರೇಮವು ಭಗವಂತನನ್ನು ಬಹಳ ಬೇಗ ಆಕರ್ಷಿಸುತ್ತದೆ. ಬಾಲಕ ಧ್ರುವನಿಗಾಗಿ ಭಗವಂತ ಚತುರ್ಭುಜಧಾರಿಯಾಗಿ ಕಾಡಿಗೆ ಹೋಗುತ್ತಾನೆ. ಪ್ರಹ್ಲಾದನಿಗಾಗಿ ಅದ್ಭುತವಾದ ನರಸಿಂಹ ರೂಪವನ್ನು ಧರಿಸುತ್ತಾನೆ. ಗೋಪಗೋಪಿಯರಿಗಾಗಿ ತಾನೂ ಗೊಲ್ಲನಾಗಿ ದನಗಳನ್ನು ಮೇಯಿಸಲು ಗಿರಿಕಂದರಗಳಲ್ಲಿ ಓಡಾಡುತ್ತಾನೆ. ಗೋವಿಂದನೆಂಬ ಬಾಲ ಭಕ್ತನಿಗಾಗಿ ಶ್ರೀನಾಥ ಪ್ರಭು ಅವನ ಸ್ನೇಹಿತನಾಗಿ ಬಂದು ಅವನೊಡನೆ ಬಗೆಬಗೆಯ ಆಟಗಳನ್ನಾಡುತ್ತಾನೆ. ಧನ್ನಾ ಜಾಟನೆಂಬ ಬಾಲಕನ ಭಕ್ತಿಗೆ ಮರುಳಾಗಿ ಅವನೊಡನೆ ಹಸುಗಳ ಹಾಲು ಹಿಂಡುತ್ತಾ ತಿರುಗಾಡುತ್ತಾನೆ. ಕಪ್ಪು ಬಣ್ಣದ ಕಲ್ಲೊಂದನ್ನು ಸಾಲಿಗ್ರಾಮವೆಂದು ನಂಬಿ ಶ್ರದ್ಧೆಯಿಂದ ಪೂಜಿಸಿದ ಚಂದ್ರಹಾಸನೆಂಬ ಬಾಲ ಭಕ್ತನನ್ನು ಹೆಜ್ಜೆಹೆಜ್ಜೆಗೂ ವಿಪತ್ತಿನಿಂದ ಪಾರುಮಾಡುತ್ತಾನೆ. ಇನ್ನು ಬಾಲಗೋಪಾಲನೆಂಬ ಬಾಲಭಕ್ತನಿಗೆ ಅವನ ಅಣ್ಣನಾಗಿ ಬಂದು ಪ್ರತಿದಿನವೂ ಶಾಲೆಯಿಂದ ಮನೆಗೆ ಹಿಂದಿರುಗುವಾಗ ಅರಣ್ಯವನ್ನು ದಾಟಿಸುವುದಲ್ಲದೆ, ಅವನ ಗುರುಗಳಿಗೆ ನೀಡಲು ಅಕ್ಷಯ ಕ್ಷೀರಪಾತ್ರೆಯನ್ನೂ ಕರುಣಿಸುತ್ತಾನೆ.

ಪರಮ ಕಾರಣಿಕನಾದ ಪರಮಾತ್ಮನು ಎಲ್ಲರಿಗೂ ಬಾಲ್ಯದಲ್ಲೇ ಶುದ್ಧ ಭಕ್ತಿಯನ್ನು ಕರುಣಿಸಿ, ಸಾಧನೆಯನ್ನು ಮುಂದೂಡಬಾರದೆಂಬ ಜಾಗೃತಿಯನ್ನು ಉಂಟುಮಾಡಿ, ಜೀವನದ ಪರಮ ಧ್ಯೇಯವನ್ನು ಸಾಧಿಸುವವರೆಗೂ ಸಹಾಯಹಸ್ತ ನೀಡಿ ಕಾಪಾಡಲೆಂದು ಪ್ರಾರ್ಥಿಸೋಣ.

*ಗ್ರಂಥಋಣ:*

*೧. 'ಶ್ರೀಮದ್ಭಾಗವತ', ಭಾರತ ದರ್ಶನ ಪ್ರಕಾಶನ, ಬೆಂಗಳೂರು-೭೦*

*೨. ಶ್ರೀರಾಮಕಥಾವಾಹಿನಿ-ಸಂತ ಭದ್ರಗಿರಿ ಅಚ್ಯುತದಾಸರು*